## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತಕ್ಕೆ ತಕ್ಕಂತೆ ಹುದ್ದೆಗಳ ಸಮರ್ಪಕವಾಗಿ ಮರುಹೊಂದಾಣಿಕೆ (Rationalization) ಕ್ರಮಗಳನ್ನು ಕೈಗೊಳ್ಳುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ: 19/05/2017.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ: 07/08/2017.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 94 ಪಿಬಿಎಸ್ 2018 (ಭಾಗ-3) ದಿನಾಂಕ: 07/09/2020.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಏಕ ಕಡತ ಸಂಖ್ಯೆ ಸಿ3(1)ಪ್ರಾಶಿ ಸ.ಪ್ರಾ.ಶಾ.ಮ.ದಾ. ಸ್ಟ್ಯಾಟ್ಸ್ ಅಂಕ ಅಂಶ 01/2021-22.

****

**ಪ್ರಸ್ತಾವನೆ:**

ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾವಣೆಯೊಂದಿಗೆ ಹೊಸ ವೃಂದ ಹಾಗೂ ವೃಂದಬಲ ನಿಗದಿಪಡಿಸಿ ವಿವರವಾಗಿ ಮೇಲೆ ಓದಲಾದ ಕ್ರಮಾಂಕ(1)ರ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ನಿಗಧಿಪಡಿಸಲಾದ ವೃಂದಬಲ ಕೆಳಕಂಡಂತಿದೆ.

| ಕ್ರ ಸಂ | ವೃಂದ | ಮಂಜೂರಾದ ವೃಂದಬಲವಾರು ಹುದ್ದೆಗಳ ಸಂಖ್ಯೆ |
|---|---|---|
| 1. | ಹಿರಿಯ ಮುಖ್ಯ ಶಿಕ್ಷಕರು | 1842 |
| 2. | ಮುಖ್ಯ ಶಿಕ್ಷಕರು | 15413 |
| 3. | ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5ನೇ ತರಗತಿ) | 108915 |
| 4. | ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ) (6ರಿಂದ 8ನೇ ತರಗತಿ) | 52630 |
| 5. | ದೈಹಿಕ ಶಿಕ್ಷಣ ಶಿಕ್ಷಕರು ಹಿರಿಯ ಶ್ರೇಣಿ-II ಮತ್ತು ದರ್ಜೆ-II | 6772 |
| 6. | ಸಂಗೀತ ಶಿಕ್ಷಕರು | 259 |

| | | |
|---|---|---|
| 7. | ಚಿತ್ರಕಲಾ ಶಿಕ್ಷಕರು | 224 |
| 8. | ನರ್ಸರಿ ಶಾಲಾ ಶಿಕ್ಷಕರು (ಎನ್.ಎಸ್.ಟಿ–ಶಾಲಾಮಾತೆ) | 2485 |
| | ಒಟ್ಟು | 188540 |

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ) ಅಧಿಸೂಚನೆ ದಿನಾಂಕ:23.08.2010 ದಿನಾಂಕ:29.07.2011 ಹಾಗೂ ದಿನಾಂಕ:12.11.2014ರಂತೆ ಕರ್ನಾಟಕ ಶಿಕ್ಷಣ ಇಲಾಖೆಯ ಸೇವೆಗಳು(ಸಾರ್ವಜನಿಕ ಶಿಕ್ಷಣ ಇಲಾಖೆ)(ನೇಮಕಾತಿ) ನಿಯಮಗಳು, 1967ಕ್ಕೆ ಮತ್ತು 2001ರ ನಿಯಮಗಳಿಗೆ ತಿದ್ದುಪಡಿಮಾಡಿ (ಎನ್.ಸಿ.ಟಿ.ಇ) ನಿಗಧಿಪಡಿಸಿರುವ ವಿದ್ಯಾರ್ಹತೆಗಳನ್ನು ಅಳವಡಿಸಿಕೊಂಡು ಮೇಲೆ ಓದಲಾದ (2)ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.

ಪ್ರಾಥಮಿಕ ಶಾಲೆಗಳ 6–8ನೇ ತರಗತಿಗೆ ಅನ್ವಯವಾಗುವಂತೆ ಮೂಲ ಹುದ್ದೆಗಳಲ್ಲಿ(ವಿಜ್ಞಾನ ಗಣಿತ) ವೃಂದಕ್ಕೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆಯೊಳಗೆ ಅವಶ್ಯಕತೆಗೆ ಅನುಗುಣವಾಗಿ ಯಾವ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ವಿಜ್ಞಾನ–ಗಣಿತ ವೃಂದದ 2ನೇ ಹುದ್ದೆ ಮಂಜೂರು ಮಾಡಲು ಅವಕಾಶವಿದೆಯೋ ಅಂತಹ 2ನೇ ಹುದ್ದೆಯನ್ನು ಮರುಪದನಾಮೀಕರಣಗೊಳಿಸಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(6–8ನೇ ತರಗತಿ) ಜೀವ ವಿಜ್ಞಾನ ಶಾಸ್ತ್ರ ಎಂಬ ನಾಮಾಂಕನ ಹುದ್ದೆಯನ್ನು ಪದನಾಮೀಕರಿಸಿ ಮೇಲೆ ಓದಲಾದ ಕ್ರಮಾಂಕ(3)ರಲ್ಲಿ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ, 2022–23ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ತಕ್ಕಂತೆ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹೊಂದಾಣಿಕೆ ಕ್ರಮಗಳನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಕೈಗೊಳ್ಳಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಶಿಕ್ಷಕರ ಕೊರತೆ ಇರುತ್ತದೆ. ಇನ್ನೂ ಕೆಲವು ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಶಿಕ್ಷಕರ ಸಂಖ್ಯೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಸಂಖ್ಯೆ ಹೆಚ್ಚಾಗಿರುವ ಶಾಲೆಗಳಿಂದ ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಪ್ರಸ್ತುತ ಕರ್ತವ್ಯ ನಿರತ ಹೆಚ್ಚುವರಿ ಶಿಕ್ಷಕರು ಹಾಗೂ ಖಾಲಿ ಹುದ್ದೆಗಳನ್ನು ಮರುಹೊಂದಾಣಿಕೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣಾ ನಿಯಂತ್ರಣ) ಕಾಯ್ದೆ–2020 ರ ಸೆಕ್ಷನ್–4ರ ಪ್ರಕಾರ ಪ್ರತೀ 2 ವರ್ಷಗಳಿಗೊಮ್ಮೆ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿರುವ ವಿದ್ಯಾರ್ಥಿ–ಶಿಕ್ಷಕರ ಅನುಪಾತದ ಆಧಾರದ ಮೇಲೆ ಹುದ್ದೆಗಳ ಸಮರ್ಪಕವಾಗಿ ಮರು ಹಂಚಿಕೆಯನ್ನು ಮಾಡಲು ಆಸ್ಪದವಿರುತ್ತದೆ.

2017–18 ನೇ ಸಾಲಿನಲ್ಲಿ ಹೆಚ್ಚುವರಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿತ್ತು, ನಂತರ ಪ್ರತಿ 2 ವರ್ಷಗಳಿಗೊಮ್ಮೆ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿತ್ತು, ಆದರೆ ಕೋವಿಡ್–2019 ಸಾಂಕ್ರಮಿಕ ರೋಗದ ಮತ್ತು ಇತರೆ ಕಾರಣಗಳಿಂದಾಗಿ ಹೆಚ್ಚುವರಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಬಲದಲ್ಲಿ ದಿನಾಂಕ: 19/05/2017ರಲ್ಲಿ ನಿಗಧಿಪಡಿಸಿರುವ ವೃಂದಬಲದಲ್ಲಿ ವ್ಯತ್ಯಾಸವಾದ ಕಾರಣ ಮೂಲ ಮಂಜೂರಾತಿ ಹುದ್ದೆಯ ಮಿತಿಗೊಳಪಟ್ಟು ವೃಂದ ಬಲವನ್ನು ದಿನಾಂಕ:31/12/2021ರಲ್ಲಿದ್ದ (ಸ್ಯಾಟ್ಸ್ ಆಧಾರದ) ಮಕ್ಕಳ ದಾಖಲಾತಿ (ಪಿ.ಟಿ.ಆರ್)ಗೆ ಅನುಗುಣವಾಗಿ

ವೃಂದಬಲವನ್ನು ಪರಿಷ್ಕರಿಸಲು ಮೇಲೆ ಓದಲಾದ ಕ್ರಮಾಂಕ (4)ರ ಆಯುಕ್ತರ ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 442 ಪಿಬಿಎಸ್ 2022,**
**ದಿನಾಂಕ:29-08-2022**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ 'ಪ್ರಾಥಮಿಕ ಶಾಲಾ ಸಹಶಿಕ್ಷಕರ/ಶಿಕ್ಷಕಿಯರು' ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಪುನರ್ ಪದನಾಮೀಕರಿಸಿದ ನಂತರ "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿಗಳ)" ವೃಂದದಲ್ಲಿಡಲಾಗುವುದು. ಮುಂದುವರೆದು ಇವರನ್ನು ಎರಡು ವರ್ಗಗಳಲ್ಲಿ ಅಂದರೆ,

1. ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು ಆಯಾ ಮಾಧ್ಯಮ)
2. ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ-ವಿಜ್ಞಾನ)

ಪುನರ್ ಪದನಾಮೀಕರಣದ ನಂತರ "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ)" ನ್ನು 6 ರಿಂದ 8ನೇ ತರಗತಿಗಳಿಗೆ ಬೋಧಿಸಲು ಸಹ ಸೂಚಿಸಬಹುದಾಗಿರುತ್ತದೆ.

"ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (6 ರಿಂದ 8ನೇ ತರಗತಿಗಳ) ಎಂಬ ಹೊಸ ವೃಂದವನ್ನು ಸೃಜಿಸಲಾಗಿದೆ. ಈ ವೃಂದದಲ್ಲಿ ಈ ಕೆಳಕಂಡ ನಾಲ್ಕು ವರ್ಗಗಳಿರುತ್ತವೆ;-

1. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು-ಆಯಾ ಮಾಧ್ಯಮ)
2. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ-ವಿಜ್ಞಾನ)
3. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಸಮಾಜ ಪಾಠಗಳು)
4. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಜೀವ ವಿಜ್ಞಾನ ಶಾಸ್ತ್ರ)

**ಶಾಲಾವಾರು ವಿಷಯವಾರು ಹುದ್ದೆಗಳ ಹಂಚಿಕೆ-ವರ್ಗೀಕರಣದ ವಿವರ**

| ಹುದ್ದೆಗಳ ನಿಗದಿ | ಕಿರಿಯ ಪ್ರಾಥಮಿಕ ಶಾಲೆ (1 ರಿಂದ 5ನೇ ತರಗತಿ ಮಾತ್ರ ಇರುವ ಶಾಲೆಗಳಲ್ಲಿ | ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಕಿರಿಯ ಪ್ರಾಥಮಿಕ ವಿಭಾಗ (1 ರಿಂದ 5ನೇ ತರಗತಿ) | ಹಿರಿಯ ಪ್ರಾಥಮಿಕ ಶಾಲೆ (6 ರಿಂದ 8ನೇ ತರಗತಿ) |
|---|---|---|---|
| 1ನೇ ಹುದ್ದೆ | ಭಾಷೆ (ಆಯಾ ಮಾಧ್ಯಮ) | ಭಾಷೆ (ಆಯಾ ಮಾಧ್ಯಮ) | ಭಾಷೆ (ಆಯಾ ಮಾಧ್ಯಮ) |
| 2ನೇ ಹುದ್ದೆ | ಗಣಿತ-ವಿಜ್ಞಾನ | ಗಣಿತ-ವಿಜ್ಞಾನ | ಗಣಿತ-ವಿಜ್ಞಾನ |
| 3ನೇ ಹುದ್ದೆ | ಭಾಷೆ -ಆಂಗ್ಲ | ಭಾಷೆ -ಆಂಗ್ಲ | ಸಮಾಜ ಪಾಠಗಳು |
| 4ನೇ ಹುದ್ದೆ | ಗಣಿತ-ವಿಜ್ಞಾನ | ಗಣಿತ-ವಿಜ್ಞಾನ | ಜೀವ ವಿಜ್ಞಾನ ಶಾಸ್ತ್ರ |
| 5ನೇ ಹುದ್ದೆ | ಭಾಷೆ (ಆಯಾ ಮಾಧ್ಯಮ) | ಭಾಷೆ ಹಿಂದಿ | ಭಾಷೆ -ಆಂಗ್ಲ |
| 6ನೇ ಹುದ್ದೆ | ಗಣಿತ-ವಿಜ್ಞಾನ | ಗಣಿತ- ವಿಜ್ಞಾನ | ಹಿಂದಿ |
| 7ನೇ ಹುದ್ದೆ | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಹುದ್ದೆಗಳ | ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ | ಭಾಷೆ (ಆಯಾ ಮಾಧ್ಯಮ) |

| | | | |
|---|---|---|---|
| 8ನೇ ಹುದ್ದೆ | ವರ್ಗೀಕರಣ ಮುಂದುವರಿಯುತ್ತದೆ. | ಹುದ್ದೆಗಳ ವರ್ಗೀಕರಣ ಮುಂದುವರಿಯುತ್ತದೆ. | ಗಣಿತ–ವಿಜ್ಞಾನ |
| 9ನೇ ಹುದ್ದೆ | | | ಸಮಾಜ ಪಾಠಗಳು |
| 10ನೇ ಹುದ್ದೆ | | | ಭಾಷೆ –ಆಂಗ್ಲ |

**2022–23ನೇ ಸಾಲಿನಿಂದ ಜಾರಿಗೆ ಬರುವಂತೆ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ**

**ವಿವಿಧ ಶಿಕ್ಷಕರ ವೃಂದಬಲವನ್ನು ಈ ಕೆಳಗಿನಂತೆ ಪರಿಷ್ಕರಿಸಿ ನಿಗಧಿಪಡಿಸಿದೆ.**

| ಕ್ರ ಸಂ | ವೃಂದ | ಪರಿಷ್ಕರಿಸಿ ನಿಗದಿಪಡಿಸಿದ ವೃಂದವಾರು ಹುದ್ದೆಗಳ ಸಂಖ್ಯೆ |
|---|---|---|
| 1 | ಹಿರಿಯ ಮುಖ್ಯ ಶಿಕ್ಷಕರು | 3396 |
| 2 | ಮುಖ್ಯ ಶಿಕ್ಷಕರು | 13096 |
| 3 | ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) (1 ರಿಂದ 5ನೇ ತರಗತಿ) | 112467 |
| 4 | ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಜಿ.ಪಿ.ಟಿ) (6ರಿಂದ 8ನೇ ತರಗತಿ) | 51781 |
| 5 | ದೈಹಿಕ ಶಿಕ್ಷಣ ಶಿಕ್ಷಕರು ದರ್ಜೆ–II | 6772 |
| 6 | ಸಂಗೀತ ಶಿಕ್ಷಕರು | 259 |
| 7 | ಚಿತ್ರಕಲಾ ಶಿಕ್ಷಕರು | 222 |
| 8 | ನರ್ಸರಿ ಶಾಲಾ ಶಿಕ್ಷಕರು (ಎನ್.ಎಸ್.ಟಿ–ಶಾಲಾಮಾತೆ) | 539 |
| | **ಒಟ್ಟು** | **188532** |

ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ (Excess)/ ಅಗತ್ಯತೆ (Needy) ಹುದ್ದೆಗಳ ಸ್ಥಳಾಂತರ/ಮರುಹೊಂದಾಣಿಕೆ (Rationalization) ಪ್ರಕ್ರಿಯೆಯಲ್ಲಿ ಸರ್ಕಾರದ ಆದೇಶ ದಿನಾಂಕ: 19/05/2017ರಲ್ಲಿ ನಿಗಧಿಪಡಿಸಿರುವ ವೃಂದಬಲವಾರು ಹುದ್ದೆಗಳಲ್ಲಿ ವೃಂದವಾರು ಹುದ್ದೆಗಳಲ್ಲಿ ವ್ಯತ್ಯಾಸವಾದಲ್ಲಿ ಮೂಲ ಮಂಜೂರಾತಿಯು ಒಟ್ಟು ಹುದ್ದೆಯ ಸಂಖ್ಯೆಯ ಮಿತಿಗೊಳಪಟ್ಟು ಹಾಗೂ ಈ ಕ್ರಮದಿಂದ ಒಟ್ಟಾರೆ ಯಾವುದೇ ಆರ್ಥಿಕ ಹೊರೆಯಾಗದಂತೆ, ದಿನಾಂಕ:31/12/2021 ರಲ್ಲಿದ್ದ (ಸ್ಯಾಟ್ಸ್ ಆಧಾರದ) ಮಕ್ಕಳ ದಾಖಲಾತಿಗೆ ಅನುಗುಣವಾಗಿ (ಪಿ.ಟಿ.ಆರ್)ನಂತೆ ಲೆಕ್ಕಾಚಾರ ಮಾಡಲಾದ ಪರಿಣಾಮ ಸರ್ಕಾರದ 19/05/2017ರ ವೃಂದ ಬಲ ಆದೇಶವನ್ನು ಪರಿಷ್ಕರಿಸಲಾಗಿದೆ.

ಮಂಜೂರಾದ ಹುದ್ದೆಗಳ ಜಿಲ್ಲಾವಾರು ಹಂಚಿಕೆಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ವಹಿಸುವರು ಹಾಗೂ ಹುದ್ದೆವಾರು, ವಿಷಯವಾರು, ವೃಂದಬಲವಾರು ಮರುಹಂಚಿಕೆ ಕುರಿತು ವಿವರವಾದ ಆದೇಶವನ್ನು ಹೊರಡಿಸುವುದು.

ಪುನರ್ ಪದನಾಮೀಕರಣ ಮಾಡಿದ **"ಪ್ರಾಥಮಿಕ ಶಾಲಾ ಶಿಕ್ಷಕರ (1 ರಿಂದ 5ನೇ ತರಗತಿಗಳ)"** ವೃಂದದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯು, ಸದರಿ ಆದೇಶದಲ್ಲಿ ನಿಗಧಿಪಡಿಸಿದ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿದೆ. ಈ ಹೆಚ್ಚುವರಿ ಶಿಕ್ಷಕರನ್ನು ಅದೇ ವೃಂದದಲ್ಲಿ ಅವರು ನಿವೃತ್ತಿಯಾಗುವವರೆಗೆ ಅಥವಾ **"ಪದವೀಧರ ಪ್ರಾಥಮಿಕ ಶಿಕ್ಷಕರು"** (6 ರಿಂದ 8ನೇ ತರಗತಿಗಳ) ವೃಂದಕ್ಕೆ ಆ ವೃಂದದ ನೇಮಕಾತಿ ಮಾನದಂಡಗಳ ಅನುಸಾರ ಸೇವಾನಿರತ ಶಿಕ್ಷಕರ ನೇಮಕಾತಿ ಆಗುವವರೆಗೆ ಮುಂದುವರೆಸಲಾಗುವುದು ಎಂಬ ಸರ್ಕಾರದ ಆದೇಶ ಸಂಖ್ಯೆ: ಇಡಿ 626 ಪಿಬಿಎಸ್ 2014 ದಿನಾಂಕ: 19/05/2017ರಲ್ಲಿನ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,
ಹೆಚ್. ಎಸ್. [signature] 29/4/2022
**(ಹೆಚ್.ಎಸ್. ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಾಥಮಿಕ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು (ಆ & ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
5. ನಿರ್ದೇಶಕರು(ಪ್ರಾಥಮಿಕ / ಪ್ರೌಢ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
6. ಎಲ್ಲಾ ಉಪನಿರ್ದೇಶಕರುಗಳಿಗೆ (ಆಯುಕ್ತರ ಕಛೇರಿ ಮುಖಾಂತರ).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.